3

ಈಗ ಬೆಂಗಳೂರಿನ ಹಲವೆಡೆ ಬರಿಸ್ತಾ ರೆಸ್ಟೋರೆಂಟುಗಳಾಗಿವೆ. ಹುಡುಕಿಕೊಂಡು ಎಂ.ಜಿ ರೋಡಿಗೋ ಏರ್‌ಪೋರ್ಟಿಗೋ ಹೋಗಬೇಕಂತಿಲ್ಲ.

'ಡ್ಯೆಡಿ, ದಿಸ್ ಇಸ್ ವದ್ಧಾsss...' ರಸ್ಪ್‌ಬೆರಿ ಸ್ಮೂತೀಯನ್ನು ಸವಿಯುತ್ತ ಮಗಳೆಂದಳು.

'ವಧ್ಧಾ ಅಂತೆ ವಧ್ಧಾ... ಕುಂಡೆ ಮೇಲೆ ಎರಡು ವದ್ದಾ ಅಂದ್ರೆ... ಅದೇನು ಕಲಿಸಿಟ್ಟಿದ್ದೀರೋಪ್ಪಾ, ಯಾವಾಗ ನೋಡಿದರೂ ಅದನ್ನೇ ಹೇಳ್ತಿರ್ತಾಳೆ' ಹೆಂಡತಿ ಮೂದಲಿಸಿದಳು. ಆದರೆ ನಂಗೊತ್ತು, ಆ ಶಬ್ದದ ಬಳಕೆಗೆ ಅವಳ ಅಭ್ಯಂತರವೇನೂ ಇಲ್ಲ; ಅದು ಅವಳಿಗೂ ಇಷ್ಟವೇ. ಸುಮ್ಮನೇ ಕೆಣಕಲು ಹೇಳುತ್ತಾಳಷ್ಟೇ.

'ಡ್ಯೆಡೀ... ನಂಗೊಂದು ಚಾಕೋಲೇಟ್ ಫಡ್ಜ್ ಕೊಡಿಸು' ಮಗಳೆಂದಳು. ಎರಡು ಮೂರು ಸಲವಷ್ಟೇ ಕರೆತಂದಿರಬೇಕು ಅವಳನ್ನಿಲ್ಲಿಗೆ, ಅವಳಿಗೆ ಮೆನುವಿನಲ್ಲಿರುವ ಎಲ್ಲ ವಸ್ತುಗಳೂ ಏನೆಂದು ಗೊತ್ತು. ಎಂಥಾ ಪ್ರಚಂಡ ಹುಡುಗಿ!

'ಈಗ ಸಾಕು. ಮುಂದಿನಬಾರಿ ಬಂದಾಗ ತಗೋಳುವಂತೆ' ನಾನಂದೆ.

ಬರಿಸ್ತಾದ ಉಪಹಾರ ನಮ್ಮೂವರಿಗೂ ಖುಷಿ ನೀಡಿತ್ತು. 'ಡ್ಯೆಡೀ... ಪ್ರತೀ ಸಂಡೇನೂ ಇಲ್ಲೇ ಬರೋಣ ಡ್ಯೆಡಿ' ಎಂದಳವಳು.

'ಪ್ರತೀ ಸಂಡೇ ಬಂದರೆ ಅಷ್ಟೇ. ನನ್ನ ಜೇಬಲ್ಲಿ ಜಿರಲೆ ಸೇರ್ಕೊಳ್ಳುತ್ತೆ...' ಎನ್ನುತ್ತ ನಾನು ಜೋರಾಗಿ ನಕ್ಕೆ.

★★★

ಈ ಮೂರ್ನಾಲ್ಕು ವರ್ಷಗಳ ಸಾಂಗತ್ಯದಲ್ಲಿ, ಬೆಂಗಳೂರಿನಲ್ಲಿ ತನಗೊಂದು ಸ್ವಂತ ಮನೆಯಿದೆ ಎಂಬುದನ್ನೇ ಹೇಳಿರಲಿಲ್ಲ ಮೋ. ಅದೂ ಅತಿ ಪ್ರತಿಷ್ಠಿತ ಲೊಕಾಲಿಟಿಯಾದ ಡಾಲರ್ಸ್ ಕಾಲನಿಯಲ್ಲಿ. ಅಂದು ಅನಿರೀಕ್ಷಿತವಾಗಿ 'ನನ್ನ ಮನೆ ತೋರಿಸುತ್ತೇನೆ ಬಾ' ಎಂದು ಆತ ಕರೆದಾಗಲೇ ನನಗದು ಗೊತ್ತಾದದ್ದು! ಇಷ್ಟೊಂದು ಶ್ರೀಮಂತನಾಗಿರುವ, ದೇಶ ವಿದೇಶಗಳೆಲ್ಲ ಸುತ್ತಿರುವ ಅವನ ಮನೆ ಹೇಗಿರಬಹುದೆಂಬ ಕುತೂಹಲ ನನಗೆ. ಆದರೆ ಎಲ್ಲೂ ಕಂಡರಿಯದ ವಿಚಿತ್ರ ರೀತಿಯ ಮನೆ ಅವನದಾಗಿರುತ್ತದೆ ಎಂದು ನಾನು ಊಹಿಸಿಯೂ ಇರಲಿಲ್ಲ. ಅವನ ಮನೆಯ ಒಳಗೆ ಗೋಡೆಗಳೇ ಇರಲಿಲ್ಲ. ಒಳಹೊಕ್ಕೊಡನೇ ಆಯತಾಕಾರದ ಒಂದೇ ಒಂದು ದೊಡ್ಡ ಕೋಣೆ. ಹಾಗಂತ ಉಳಿದೆಲ್ಲ ಪರಿಕರಗಳನ್ನು ಅತೀ ಸುಸಜ್ಜಿತವಾಗಿ ಜೋಡಿಸಿಡಲಾಗಿತ್ತು. ಲಿವಿಂಗ್ ರೂಮ್ ಇರಬೇಕಾದಲ್ಲಿ ಸೋಫಾ ಟೀವಿ, ಪಕ್ಕದಲ್ಲೇ ದೊಡ್ಡದೊಂದು ಮರದ ಆನೆ. ಆನೆಯ ಬೆನ್ನಮೇಲೆ ಕೈ ಹಾಕಿ ನಿಂತು 'ಡು ಯು ನೊ? ದಿಸ್ ಈಸ್ ಡನ್ ಇನ್ ವನ್ ಸಿಂಗಲ್ ಪೀಸ್ ಆಫ್ ವುಡ್. ಐ ಲವ್ ಇಟ್' ಎಂದು ಹೆಮ್ಮೆಯಿಂದ ಹೇಳಿದ ಮೋ. ಮಲಗುವ ಕೋಣೆ ಇರಬೇಕಾದಲ್ಲಿ ಕಾಟು, ಇನ್ನೊಂದು ಮೂಲೆಯಲ್ಲಿ ಅಡುಗೆ ಮನೆ, ಒಂದೇ ಒಂದು ಚಮಚವೂ ಕೊರತೆಯಾಗದಂತೆ ಪರಿಪೂರ್ಣ ಮಾಡರ್ನ್ ಕಿಚನ್.

'ನಿನಗೆ ಅಡಿಗೆ ಮಾಡಲೂ ಬರುತ್ತಾ?' ಕೇಳಿದೆ ನಾನು.

'ಯಾಕೆ? ಮೆಕ್ಸಿಕನ್ ಕಾಬ್ರಿಟೊ ಮಾಡಿಕೊಡ್ಲಾ?' ಎಂದ ವಿಭಿನ್ನ ಟೋನ್‌ನಲ್ಲಿ. 'ನನಗೆ ಚಾ ಕೂಡ ಮಾಡಲು ಬರುವುದಿಲ್ಲ' ಎನ್ನುತ್ತಿದ್ದಾನೆ ಎಂಬುದು ನನಗೆ ಗೊತ್ತಾಯಿತು. ಕಿಚನ್ನಿನ ಎದುರಿಗೇ ಕುಶಲ ಕುಸುರಿಯ ಕಟ್ಟಿಗೆಯ ಡೈನಿಂಗ ಟೇಬಲ್ಲು; ಫುಲ್ ಟೆನ್ ಸೀಟರ್! ಅತ್ತ ಕಡೆ